ರಾಜಕೀಯ ಕ್ಷೇತ್ರದಲ್ಲಿ ಸರಳ–ಸಜ್ಜನ ರಾಜಕಾರಣಿಯಾಗಿ ಗುರುತಿಸಿಕೊಂಡ ವೈ.ಎಸ್.ವಿ. ದತ್ತ ಅವರು ಕನ್ನಡ ಸಾಹಿತ್ಯದ ಕುರಿತು ಅಪಾರ ಒಲವುಳ್ಳವರು. ಕಡೂರಿನ ಯಗಟಿ ಅವರ ಹುಟ್ಟೂರು. ಭೌತಶಾಸ್ತ್ರದ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದವರು. ಕನ್ನಡದ ಪರವಾಗಿ, ರೈತರ ಪರವಾಗಿ ಧ್ವನಿ ಎತ್ತುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಅವರು, ಕಡೂರು ಕ್ಷೇತ್ರದಿಂದ ಶಾಸಕರಾಗಿ ವಿಧಾನಸಭೆಗೆ ಆಯ್ಕೆಯಾಗಿದ್ದರು; ವಿಧಾನ ಪರಿಷತ್ ಸದಸ್ಯರಾಗಿಯೂ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದಾರೆ.

ವಿಶೇಷವಿಲ್ಲ. 'ಋಷಿವಾಣಿ' ಎಂಬ ಪುಟ್ಟ ಪುಸ್ತಕವನ್ನು ಅಚ್ಚು ಹಾಕಿದ್ದೇನೆ. ಅದನ್ನು ಕಳುಹಿಸುತ್ತೇನೆ. ಹತ್ತು ಉಪನಿಷತ್ತುಗಳಿಂದ ನಾನೇ ಆರಿಸಿದ ಮಂತ್ರಗಳೂ ಅದರ ಸರಳಾರ್ಥಗಳೂ ಅದರಲ್ಲಿ ಒಂದು ಕ್ರಮವನ್ನು ಅನುಸರಿಸಿ ಅಡಕವಾಗಿದೆ...' (ಮಾಸ್ತಿಯವರ 'ಪತ್ರಗಳು' ಕೃತಿ. ಪುಟ 31-32)

ಮಾಸ್ತಿಯವರಾದರೋ ಕುವೆಂಪುರವರ ಅಪಾರ ಪ್ರತಿಭೆಯನ್ನು ಮೆಚ್ಚಿ, ತಮ್ಮ ಕಣ್ಣ ಮುಂದಿನ ತರುಣನ ಬೆನ್ನು ತಟ್ಟುತ್ತಾ ಬಂದರು. ಇದು ಕುವೆಂಪುರವರಲ್ಲಿ ಕಾವ್ಯಸೃಷ್ಟಿಗೆ ಆತ್ಮವಿಶ್ವಾಸ ತುಂಬಿತೆನ್ನಬಹುದು.

ಮಾಸ್ತಿಯವರ 'ಆದಿಕವಿ ವಾಲ್ಮೀಕಿ' ಬರಹವನ್ನು ವಿಮರ್ಶಿಸುತ್ತ ದ.ರಾ. ಬೇಂದ್ರೆ ಅವರ ಸಂಪಾದಕತ್ವದ 'ಜೀವನ' ಪತ್ರಿಕೆಗೆ ಪ್ರಬುದ್ಧ ಲೇಖನವನ್ನು ಬರೆಯುತ್ತಾರೆ ಕುವೆಂಪುರವರು. ಆ ಲೇಖನದ ಕೊನೆಯಲ್ಲಿ ಮಾಸ್ತಿಯವರನ್ನು ಕುರಿತು ಕುವೆಂಪುರವರು ಹೇಳಿರುವ ಮಾತುಗಳನ್ನು ನೋಡಿ:

'ಶ್ರೀಯುತರು ನನಗೆ ಬಹಳ ಹಿರಿಯರಾದರೂ ನನ್ನನ್ನು ಅಕ್ಕರೆಯ ಗೆಳೆಯನಂತೆ ಕಾಣುತ್ತಾರೆ. ಚಿಕ್ಕತಮ್ಮನಿಗೆ ಒಮ್ಮೊಮ್ಮೆ ಪೆಪ್ಪರಮೆಂಟುಗಳನ್ನು ತಂದುಕೊಡುತ್ತಾರೆ. ನನಗೆ ಅವರಲ್ಲಿರುವ ಗೌರವ, ಸ್ನೇಹಗಳು ಮೌನದಿಂದ ಮಾತ್ರ ನಿವೇದಿತ. ಅವರ ಸಾಹಿತ್ಯ ಬಹಳ ದೊಡ್ಡದು. ಅವರು ಅದಕ್ಕಿಂತಲೂ ದೊಡ್ಡವರು ಎಂದು ನನ್ನ ಭಾವನೆ. ದುಂಬಿಯ ಉಸಿರಿಗೂ ವಿಕಂಪಿಸುವ ಹೂವಿನ ತುಟಿಯ ಜೇನು ಹನಿಯಂತೆ ಅವರ ಬಾಳು ಸೂಸೂಕ್ಷ್ಮ, ಸುಕೋಮಲ, ಸುಮಧುರ. ಸುಸಂಸ್ಕೃತ ಎಂದು ಸರ್ವವಿಧದಿಂದಲೂ ಹಾಗೆಯೇ ಇದ್ದ ಪವಿತ್ರ ಸ್ಮರಣೆಯ ಪರಮ ಪೂಜ್ಯ ದಿವಂಗತ ಶ್ರೀ ವೆಂಕಣ್ಣಯ್ಯನವರು ಹೇಳುತ್ತಿದ್ದರು. ಆ ಬಾಳು, ಆ ಉಸಿರು ಬಹುಕಾಲ ಬಾಳಲಿ. ನಮಗೆಲ್ಲ ಒಂದು ಆಶೀರ್ವಾದವಾಗಿ, ಆವೇಶವಾಗಿ, ಆದರ್ಶವಾಗಿ, ಅಕ್ಕರೆಯ ಆಶ್ರಯವಾಗಿ, ನಿರಾಶೆಯಲ್ಲಿ ಉತ್ಸಾಹವಾಗಿ, ಅತ್ಯುತ್ಸಾಹದಲ್ಲಿ ವಿವೇಕವಾಗಿ, ಅತಿವಿವೇಕದ ಮಂದ ಸಮಯದಲ್ಲಿ ಹಿಂದುಳಿಯದ ಸನ್ಮತಿಯಾಗಿ ಆ ಬಾಳು ಆ ಉಸಿರು ಬಹುಕಾಲ ನಮಗುಳಿಯುವಂತೆ ದೇವರ ದೇವನು ದಯೆಗೈಯ್ಯಲಿ'.

ಮಾಸ್ತಿಯವರ ಬಗ್ಗೆ ಕುವೆಂಪುರವರು ಹೇಳಿರುವ ಮೇಲಿರುವ ಮಾತುಗಳನ್ನು ಕೇಳಿದರೆ ನಾವೇ ಒಂದು ರೀತಿಯ ಭಾವಲೋಕಕ್ಕೆ ಜಾರುತ್ತೇವೆ. ಇದಲ್ಲವೇ ವಿದ್ವತ್ತು ವಿದ್ವತ್ತಿಗೆ ಮಣಿಯುವ ಪರಿ! ಇದಲ್ಲವೆ ಸಜ್ಜನಿಕೆಯ ಉತ್ತುಂಗತೆ!

ವಿಷಾದದ ಸಂಗತಿ ಎಂದರೆ ಇತ್ತೀಚಿನ ದಿನಗಳಲ್ಲಿ ಇಂತಹ ಸಂವಾದಗಳೇ ಅಪರೂಪವಾಗುತ್ತಿವೆ. ನಮ್ಮ ವಿಚಾರಧಾರೆಗಳು, ಪದ್ಧತಿಗಳು, ನಂಬಿಕೆಗಳು ಇನ್ನೊಬ್ಬರಿಗೆ ಒಪ್ಪಿಗೆಯಾಗದಿರಬಹುದು. ಅವರು ನಮ್ಮ ವಿಚಾರವನ್ನು ವಿರೋಧಿಸಲೂಬಹುದು. ಆದರೆ ಅವು ನಮ್ಮ ಮನುಷ್ಯತ್ವ, ಸ್ನೇಹ, ವಿವೇಕ, ಸಜ್ಜನಿಕೆ ಇವುಗಳನ್ನು ಧಿಕ್ಕರಿಸುವ ಕೆಸರೆರಚಾಟವಾಗಬಾರದು. ಅದು ರಾಜಕಾರಣವಾಗಲಿ, ಸಾಹಿತ್ಯವಾಗಲಿ, ಸಾಮಾಜಿಕ ಕ್ಷೇತ್ರವಾಗಿರಲಿ, ಆರೋಗ್ಯಕರ ಸಂವಾದಗಳ ಜಾಗದಲ್ಲಿ ವೈಯಕ್ತಿಕ ಭರ್ತ್ಸನೆ, ನಿಂದನೆ, ಹಗುರವಾದ ಮಾತುಗಳ ವಿನಿಯಮ ಇವುಗಳೇ ರಾರಾಜಿಸುವಂತಾಗಬಾರದು. ಮೂಲಭೂತ ವಾಕ್‌ಸ್ವಾತಂತ್ರ್ಯವನ್ನು ನಮಗೆ ನೀಡಿರುವ ನಮ್ಮ ಸಂವಿಧಾನ ನಮ್ಮಿಂದ ನಿರೀಕ್ಷಿಸುವುದು ಇದನ್ನೇ. ಕುವೆಂಪು ಮತ್ತು ಮಾಸ್ತಿಯವರ ಸಂಬಂಧ ಮತ್ತು ಸಂವಾದ ನಮಗೆ ಒಂದು ಮಾದರಿ ಮತ್ತು ಆದರ್ಶ.

●